



**ಸಮೃದ್ಧಿ ಎಸ್. ಪಾವಟೆ**
3ನೇ ತರಗತಿ, ಎಸ್‌ಆರ್‌ಕೆಎಸ್
ಇಂಗ್ಲಿಷ್ ಸ್ಕೂಲ್, ಗೋಕಾಕ್





**ಭಾಗ್ಯಲಕ್ಷ್ಮೀ ಹೆಚ್.ಎನ್.**
9ನೇ ತರಗತಿ, ಇಂಡಿಯನ್
ಇಂಟರ್ ನ್ಯಾಷನಲ್ ಇಂಗ್ಲಿಷ್ ಮೀಡಿಯಂ
ಸ್ಕೂಲ್, ಚಿತ್ರದುರ್ಗ

# ಗುಡು ಗುಡು ಗುಡು ಗುಮ್ಮ

ಗುಡುಗುಡು ಗುಡುಗುಡು ಗುಡುಗುಮ್ಮ
ಗುಡುಗುತ ಬಂದನು ನೋಡಮ್ಮಾ
ಬಾನಿನ ಬಯಲಲಿ ಕಲ್ಲು ಗುಂಡುಗಳ
ಉರುಳಿಸಿ ಬಿಟ್ಟವರಾರಮ್ಮಾ?

ಛಟ ಛಟ ಸಿಡಿಲು ಬಡಿದಿಹುದಮ್ಮಾ
ಕಿವಿಯೇ ಸಿಡಿದು ಹೋಗುವುದಮ್ಮಾ
ಬಾನಂಗಳದಲಿ ಈ ದೊಡ್ಡ ಪಟಾಕಿ
ಹಚ್ಚಿ ಹೊಡೆಯುವರಾರಮ್ಮಾ?

ಫಳ್ ಫಳೀರ್ ಮಿಂಚು ಮಿಂಚಿದೆಯಮ್ಮಾ
ಕಣ್ಣನು ತೆರೆಯಲು ಭಯವಮ್ಮಾ
ಬಾನ ದಾರಿಯಲಿ ಈ ಪರಿ ಬೆಳಕಿನ
ಕಿಡಿಗಳ ಸಿಡಿಸುವರಾರಮ್ಮಾ?

ತೇಲುತ ಬಂದಿದೆ ಕಾರ್ಮುಗಿಲಮ್ಮಾ
ಹಗಲನೇ ಅಡಗಿಸಿ ಮುಚ್ಚಿಹುದಮ್ಮಾ
ಬಾನಿನ ಮೈಯಿಗೆ ಕರಿ ಕರಿ ಕಂಬಳಿ
ಹೊಚ್ಚಿ ಹೋದವರಾರಮ್ಮಾ?

ಜೋರು ಜೋರು ಮಳೆ ಬಂತಮ್ಮಾ
ಹೊಳೆಯ ತುಂಬಾ ನೆರೆ ತಂತಮ್ಮಾ
ಬಾನಲಿ ನಿಂತು ಕೊಡದಲಿ ನೀರನು
ಭೂಮಿಗೆ ಚೆಲ್ಲುವರಾರಮ್ಮಾ?

**ಚಂದ್ರಿಕಾ ಹೆಗಡೆ, ಮತ್ತಿಹಳ್ಳಿ**
ಕಲೆ: ಸಂತೋಷ್ ಸಸಿಹಿತ್ಲು

